ಈ) ಸರ್ಕಾರವು ಈ ವಿಷಯದಲ್ಲಿ ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಔರಾದ್ ತಾಲ್ಲೂಕಿಗೆ ವಿದ್ಯುಚ್ಛಕ್ತಿ ಪೂರೈಕೆಯು ಭಾಲ್ಕಿ 110 ಕೆ.ವಿ. ವಿದ್ಯುತ್ ಕೇಂದ್ರದಿಂದ ಆಗುತ್ತಿರುವುದು ನಿಜ. 110 ಕೆ.ವಿ. ಭಾಲ್ಕಿ ಕೇಂದ್ರದಿಂದ ಹೊರಡುವ 33 ಕೆ.ವಿ. ವಿದ್ಯುತ್ ಪ್ರಸರಣ ಮಾರ್ಗವು ಔರಾದ್‌ನ 33 ಕೆ.ವಿ. ವಿದ್ಯುತ್ ಉಪಕೇಂದ್ರವನ್ನಲ್ಲದೆ, ಸಂತಪುರ ಮತ್ತು ಕಮಲನಗರದಲ್ಲಿರುವ ಇನ್ನೂ ಎರಡು 33 ಕೆ.ವಿ. ವಿದ್ಯುತ್ ಉಪ-ಕೇಂದ್ರಗಳಿಗೆ ವಿದ್ಯುತ್ ಸರಬರಾಜು ಮಾಡುತ್ತಿದೆ. ಇದು ಔರಾದ್ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕಡಿಮೆ ವೋಲ್ಟೇಜ್ ಪರಿಸ್ಥಿತಿಯನ್ನು ಉಂಟು ಮಾಡುತ್ತಿದೆ.

ಆ), ಇ) ಮತ್ತು ಈ) ಈಗಿರುವ ಔರಾದ್‌ನ 33 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು 110 ಕೆ.ವಿ.ಯ ಮಟ್ಟಕ್ಕೆ ಮೇಲ್ದರ್ಜೆಗೇರಿಸಲು ಒಂದು ವಿವರವಾದ ತಾಂತ್ರಿಕ ವರದಿಯನ್ನು ಸಿದ್ಧಪಡಿಸಲಾಗಿದ್ದು, ಇದನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ತಾಂತ್ರಿಕ ಸಮಿತಿಯ ಮುಂದೆ ತೀರ್ಮಾನಕ್ಕಾಗಿ ಮಂಡಿಸಲಾಗುವುದು. ಖೇರ್ಡಾ (ಬಿ) ಮತ್ತು ಠಾಣಾ ಖುಷನೂರು 33 ಕೆ.ವಿ. ವಿದ್ಯುತ್ ಉಪಕೇಂದ್ರಗಳ ಸ್ಥಾಪನೆ ಬಗ್ಗೆ ವಿವರವಾದ ತಾಂತ್ರಿಕ ವರದಿಯನ್ನು ಸಿದ್ಧಪಡಿಸಲು ಹೆಚ್ಚಿನ ವಿವರಗಳನ್ನು ಸಂಗ್ರಹಿಸಲಾಗುತ್ತಿದೆ. ಆದರೂ ಸಹಾ, ಔರಾದ್ ತಾಲ್ಲೂಕಿನ ಕೆಲವು ಭಾಗಗಳಲ್ಲಿ ತೋರಿರುವ ಕಡಿಮೆ ವೋಲ್ಟೇಜ್ ಪರಿಸ್ಥಿತಿಯನ್ನು ನಿವಾರಿಸುವ ದೃಷ್ಟಿಯಿಂದ ಒಂದು ಪ್ರತ್ಯೇಕವಾದ 33 ಕೆ.ವಿ.ಯ ಜೋಡಿ ಮಾರ್ಗವನ್ನು ಭಾಲ್ಕಿ 110 ಕೆ.ವಿ. ಕೇಂದ್ರದಿಂದ ಸಂಗಮ ಕ್ರಾಸ್‌ವರೆಗೆ ಹಾಗೂ 33 ಕೆ.ವಿ.ಯ ಒಂಟಿ ಮಾರ್ಗವನ್ನು ಸಂಗಮ ಕ್ರಾಸ್‌ನಿಂದ ಸಂತಪುರಕ್ಕೆ ನಿರ್ಮಿಸುವ ಪ್ರಸ್ತಾವನೆಗೆ ದಿನಾಂಕ 2.8.2000ದಂದು ಅಂಗೀಕಾರ ನೀಡಲಾಗಿದೆ.

ಔರಾದ್ ತಾಲ್ಲೂಕಿನಲ್ಲಿ ಪಡಿತರ ಆಹಾರ ಧಾನ್ಯ ವಿತರಣೆ

5055 -ಶ್ರೀ ಗುಂಡಪ್ಪ ವಕೀಲ್ (ಔರಾದ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಔರಾದ್ ತಾಲ್ಲೂಕಿನಲ್ಲಿ ನ್ಯಾಯಬೆಲೆ ಅಂಗಡಿಗಳ ಡೀಲರುಗಳು ಹತ್ತಿರ ಬೋಗಸ್ ಹಸಿರು ಕಾರ್ಡುಗಳಿದ್ದು ಅಂಥ ಬೇನಾಮಿ ಕಾರ್ಡುಗಳ ಆಧಾರದ ಮೇಲೆ ಆಹಾರ ಧಾನ್ಯ ಎತ್ತಿ, ದುರುಪಯೋಗ ಮಾಡುವ ಸಂಗತಿ ಸರ್ಕಾರಕ್ಕೆ ಗೊತ್ತಿದೆಯೇ ? ಹಾಗಿದ್ದರೆ ಸರ್ಕಾರ ಕೈಗೊಂಡ ಕ್ರಮವೇನು ?

ಆ) ಪ್ರತಿ ನ್ಯಾಯಬೆಲೆ ಅಂಗಡಿಯಲ್ಲಿ ಯಾವುದೇ ಬಿಲ್ ಕೊಡದೇ ರಸೀದಿ ಕೊಡದೇ ಹೆಚ್ಚಿನ ದರದಲ್ಲಿ ಆಹಾರ ಧಾನ್ಯ ಬಡವರಿಗೆ ಮಾರುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಕೈಗೊಂಡ ಕ್ರಮವೇನು ?

ಇ) ಪ್ರತಿ ಹಸಿರು ಕಾರ್ಡಿಗೆ ನಿಗದಿಪಡಿಸಿರುವ ಬೆಲೆ ಏನು? ಅಂಥ ಬೆಲೆ ಬಗ್ಗೆ ಸಾರ್ವಜನಿಕರಿಗೆ ತಿಳಿಸುವ ಕ್ರಮ ಕೈಗೊಳ್ಳಲಾಗಿದೆಯೇ?

ಈ) ಸಂಪೂರ್ಣ ಬೆರಾದ ತಾಲ್ಲೂಕಿನಲ್ಲಿ ಪ್ರತಿ ಗ್ರಾಮದಲ್ಲಿ ಎಷ್ಟು ಹಸಿರು ಕಾರ್ಡುಗಳು ಇರುತ್ತವೆ ಹಾಗೂ ಸಂಪೂರ್ಣ ಕಾರ್ಡುಗಳಿಗೆ ಆಹಾರ ಧಾನ್ಯ ಕೊಡಲಿಲ್ಲವೆಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ತೆಗೆದುಕೊಂಡ ಕ್ರಮವೇನು?

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) :

ಅ) ಇಲ್ಲ.

ಆ) ಇಲ್ಲ.

ಇ) ಪ್ರತಿ ಕಾರ್ಡಿಗೆ ರೂ. 5.00 ಸಾರ್ವಜನಿಕರಿಗೆ ತಿಳಿಸಲಾಗಿದೆ.

ಈ) 46,092, ಇಲ್ಲ.

ಗೇರುಸೊಪ್ಪ ಟೇಲರೇಸ್ ಜಲವಿದ್ಯುತ್ ಯೋಜನೆಯ ವಿವರಗಳು

5056 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೇರುಸೊಪ್ಪದ ಟೇಲ್‌ರೇಸ್ ಜಲ ವಿದ್ಯುತ್ ಯೋಜನೆ ಪ್ರಗತಿಯಲ್ಲಿದೆಯೇ?

ಆ) ಈ ಯೋಜನೆಯಿಂದ ಎಷ್ಟು ಹೆಕ್ಟೇರ್ ಮಳೆ ಬೀಳುವ ಕಾಡಿನ ಪ್ರದೇಶ ಮುಳುಗಡೆಯಾಗುವುದು?

ಇ) ಈ ಯೋಜನೆಯ ಅಂದಾಜು ವೆಚ್ಚವೆಷ್ಟು? ಈ ಯೋಜನೆಗೆ ವಿಶ್ವ ಬ್ಯಾಂಕಿನಿಂದ ಪಡೆದಿರುವ ಸಾಲದ ಮೊತ್ತ ಎಷ್ಟು?

ಈ) ಈ ಯೋಜನೆಯ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಎಷ್ಟು? ಈ ಪ್ರಾಜೆಕ್ಟ್ ಎಂದಿನಿಂದ ಕಾರ್ಯ ನಿರ್ವಹಿಸುವುದು?

ಶ್ರೀ ವೀರಕುಮಾರ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಈ ಯೋಜನೆಯು ಪ್ರಗತಿಯಲ್ಲಿದೆ ಮತ್ತು ಮುಕ್ತಾಯದ ಹಂತದಲ್ಲಿದೆ. ಮೊದಲನೇ ಘಟಕದ ಯಾಂತ್ರಿಕ ತಿರುಗಣೆಯನ್ನು ಯಶಸ್ವಿಯಾಗಿ 14.7.2000ರಂದು ಮಾಡಲಾಯಿತು.

ಆ) ಮುಳುಗಡೆಯಾಗುವ ಮಳೆ ಬೀಳುವ ಕಾಡಿನ ಪ್ರದೇಶ 597.25 ಹೆಕ್ಟೇರ್‌ಗಳು.

ಇ) ಈ ಯೋಜನೆಯ ಅಂದಾಜು ವೆಚ್ಚ 531 ಕೋಟಿ ರೂ.ಗಳು (ಬಡ್ಡಿ ದರ ಸೇರಿಸಿ) ವಿಶ್ವಬ್ಯಾಂಕ್ 169 ಕೋಟಿ ರೂ.ಗಳನ್ನು ಈ ಯೋಜನೆಗೆ ಸಾಲವಾಗಿ ನೀಡಿತ್ತು. ಆ ಹಣದಲ್ಲಿ 27.58 ಕೋಟಿ ರೂ.ಗಳನ್ನು ಮಾತ್ರ ತೆಗೆದುಕೊಳ್ಳಲಾಗಿದೆ.